ಪ್ರಜಾವಾಣಿ ಭಾನುವಾರ • ಮೇ 12, 2024

## ಸ್ವರ್ಣವಲ್ಲೀ ಹಿರಿಯ ಮಠಾಧೀಶ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಹೇಳಿಕೆ

# ಸನಾತನ ಧರ್ಮಕ್ಕೆ ಶಕ್ತಿ ನೀಡಿದವರು ಶಂಕರರು

ಪ್ರಜಾವಾಣಿ ವಾರ್ತೆ

**ಶಿರಸಿ:** 'ಅಧ್ಯಾತ್ಮ ವಿದ್ಯೆಗೆ ಪುನರುಜ್ಜೀವನ ನೀಡಿದ್ದ ಶಂಕರ ಭಗವತ್ಪಾದರು ದಿಕ್ಕು ತಪ್ಪಿದ ಸನಾತನ ಧರ್ಮದ ಇತಿಹಾಸವನ್ನು ಮೂಲ ಸ್ಥಿತಿಗೆ ತಂದವರು' ಎಂದು ಸ್ವರ್ಣವಲ್ಲೀ ಹಿರಿಯ ಮಠಾಧೀಶ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಸ್ವರ್ಣವಲ್ಲೀ ಮಠದಲ್ಲಿ ಶನಿವಾರ ಶಂಕರ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವದಿಸಿದರು.

'ಶಂಕರ ಭಗವತ್ಪಾದರು ಅದ್ವೈತ ಸಿದ್ಧಾಂತ ಪ್ರತಿಪಾದಿಸಿ ಜಗದ್ಗುರು ಎನಿಸಿಕೊಂಡವರು. ಧರ್ಮದ ತಿರುಳೇ ಅಧ್ಯಾತ್ಮವಾಗಿದೆ ಎಂದು ತಿಳಿಸಿದ ಶಂಕರರನ್ನು ಕೃತಜ್ಞತೆ ದೃಷ್ಟಿಯಲ್ಲಿ ನೋಡಬೇಕು. ಜತೆಗೆ ಅವರ ಸಂದೇಶ ಅರಿವಿಗೆ ತಂದುಕೊಳ್ಳಲು ಸ್ಮರಣೆ ಮಾಡಬೇಕು. ಶಂಕರರ ಭಾಷ್ಯವು ಸಾವಿರಾರು ವರ್ಷಗಳ ಇತಿಹಾಸ ಹೊಂದಿದ್ದು, ಭವಿಷ್ಯದ ಸಾವಿರಾರು ವರ್ಷಗಳ ಕಾಲವೂ ಇರುವಷ್ಟು ಸತ್ವಯುತವಾಗಿವೆ. ಭಕ್ತಿ, ಜ್ಞಾನ, ವೈರಾಗ್ಯಗಳ ಸಂಗಮಗಳ ದಿವ್ಯ ವ್ಯಕ್ತಿತ್ವ ಅವರನ್ನು ಎಲ್ಲರಲ್ಲಿಯೂ ಸ್ಥಾಯಿ ಮಾಡಿಸಿದೆ' ಎಂದು ತಿಳಿಸಿದರು.

ಹುಬ್ಬಳ್ಳಿ ಅದ್ವೈತ ವಿದ್ಯಾಶ್ರಮದ ಪ್ರಣವಾನಂದತೀರ್ಥ ಸ್ವಾಮೀಜಿ ಮಾತನಾಡಿ, 'ಸನಾತನಿಗಳಿಗೆ ಮೂಲಶಕ್ತಿ ನೀಡಿದವರು ಶಂಕರಾಚಾರ್ಯರು. ಅವರು ಪ್ರತಿಪಾದಿಸಿದ ಅದ್ವೈತ ಸಿದ್ಧಾಂತ ಎಲ್ಲೆಡೆ ವ್ಯಾಪಿಸಿದೆ. ಅಂಥ ವ್ಯಾಪಕ ಶಕ್ತಿಯ ಶಂಕರ ತತ್ವಗಳ ಪರಿಪಾಲನೆ ಇಂದಿನ ಅಗತ್ಯವಾಗಿದೆ' ಎಂದರು.

ಇದೇ ವೇಳೆ 'ಸಾಧನಾ ಶಂಕರ' ಪ್ರಶಸ್ತಿಯನ್ನು ಕಲಬುರಗಿಯ ಶ್ರೀಸತ್ಯಸಾಯಿ ಮಾನವ ಅಭ್ಯುದಯ ವಿಶ್ವ ವಿದ್ಯಾಲಯದ ಪ್ರಾಧ್ಯಾಪಕ ಶ್ರೀಧರ ಭಟ್ ಐನಕೈ ಅವರಿಗೆ ಪ್ರದಾನ ಮಾಡಲಾಯಿತು. ಸಾಮಾಜಿಕ ಕಾರ್ಯಕರ್ತ ಪರಮೇಶ್ವರ ಹೆಗಡೆ ಧೂಪದಹೊಂಡ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಸ್ವರ್ಣವಲ್ಲೀಯ ಆನಂದ ಬೋಧೇಂದ್ರ ಸರಸ್ವತೀ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕಾರ್ಯಕ್ರಮದ ಅಂಗವಾಗಿ ಶಂಕರ ಸಮಗ್ರ ಸ್ತೋತ್ರ ಪಾರಾಯಣ, ಸಾಮೂಹಿಕವಾಗಿ ಶ್ರೀಗಣೇಶ ಪಂಚರತ್ನ ಹಾಗೂ ಶ್ರೀಶಾರದಾ ಭುಜಂಗ, ಶ್ರೀತೋಟಕಾಷ್ಟಕ ಸ್ತೋತ್ರ ಪಠಣ ಮಾತೆಯರಿಂದ ನಡೆಯಿತು. ಮಠದ ಆಡಳಿತ ಮಂಡಳಿ ಅಧ್ಯಕ್ಷ ವಿ.ಎನ್.ಹೆಗಡೆ ಬೊಮ್ನಳ್ಳಿ ಸ್ವಾಗತಿಸಿದರು. ಶಾಂಭವಿ ಭಟ್ ಪ್ರಾರ್ಥಿಸಿದರು. ಶಂಕರ ಭಟ್ ಉಂಚಳ್ಳಿ ನಿರೂಪಿಸಿದರು.



ಶಿರಸಿಯ ಸ್ವರ್ಣವಲ್ಲೀಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀಧರ ಭಟ್ ಐನಕೈ ದಂಪತಿಗೆ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ 'ಸಾಧನಾ ಶಂಕರ' ಪ್ರಶಸ್ತಿ ಪ್ರದಾನ ಮಾಡಿದರು. ಆನಂದಬೋಧೇಂದ್ರ ಸರಸ್ವತೀ ಭಾಗವಹಿಸಿದ್ದರು

> **ಸನಾತನ ತತ್ವ ಉಳಿಯಲು ಶಂಕರ ತತ್ವಗಳ ಪರಿಪಾಲನೆ ಆಗಬೇಕು. ಈ ನಿಟ್ಟಿನಲ್ಲಿ ಗುರುಪೀಠಗಳು, ಶಿಷ್ಯಪರಂಪರೆ ಪ್ರಯತ್ನ ಶ್ಲಾಘನೀಯ**
>
> **ಶ್ರೀಧರ ಭಟ್,**
> ಸಾಧನಾ ಶಂಕರ ಪ್ರಶಸ್ತಿ ಪುರಸ್ಕೃತರು